ಆದೇಶ ಹೊರಡಿಸಿದೆ. ಆದರೆ ಮಂಗಗಳನ್ನು ಹಿಡಿದು ತರುವವರಾರು? ಮಂಗಗಳ ಸಂತಾನಶಕ್ತಿ ಹರಣ ಶಸ್ತ್ರಕ್ರಿಯೆ ದುಬಾರಿ ಮತ್ತು ಸಂಕೀರ್ಣ. ಶಸ್ತ್ರಕ್ರಿಯೆಗೊಳಗಾದ ಕೋತಿಗಳನ್ನು ಉಳಿದ ಕೋತಿಗಳು ಹೇಗೆ ಸ್ವೀಕರಿಸುತ್ತವೆ? ಎಂಬ ಪ್ರಶ್ನೆಯೂ ಇದೆ.

ಡಿಸೆಂಬರ್ 2022ರಲ್ಲಿ ಕೇಂದ್ರ ಸರ್ಕಾರವು ವನ್ಯಜೀವಿ ಸಂರಕ್ಷಣಾ ಕಾಯಿದೆಯ ಶೆಡ್ಯೂಲ್ 2ರಲ್ಲಿದ್ದ ಮಂಗಗಳ ಕುರಿತ ನಿಯಮವನ್ನು ಹೊರಗಿಟ್ಟಿತು. ಮಂಗಗಳ ಬೇಟೆ ಮತ್ತು ವಧೆ ಎರಡಕ್ಕೂ ಅವಕಾಶ ಕಲ್ಪಿಸಲು ಹೀಗೆ ಮಾಡಲಾಗಿತ್ತು.

'ಈಗ ಕೋತಿಗಳಿಗೂ ಬೀದಿನಾಯಿಗಳ ಗತಿಯಾಗಿದೆ. ಮೊದಲಿನಿಂದಲೂ ಕೋತಿ ಮತ್ತು ಮನುಷ್ಯರು ಸಹಬಾಳ್ವೆಯ ಬದುಕು ಬದುಕುತ್ತಿದ್ದರು. ಕಳೆದ ಐವತ್ತು ವರ್ಷಗಳಲ್ಲಿ ಎಲ್ಲವೂ ಬದಲಾಗಿದೆ. ಮೊದಲಿದ್ದ ಆ ಸಂಬಂಧವನ್ನು ಪುನರ್ ಸ್ಥಾಪಿಸಿದರೆ ಸಮಸ್ಯೆ ತನ್ನಿಂತಾನೇ ಬಗೆಹರಿಯುತ್ತದೆ ಎನ್ನುವ ತಜ್ಞರು, ಕೋತಿಗಳ ಆವಾಸಸ್ಥಾನವನ್ನು ನಾವು ಆಕ್ರಮಿಸಿ ಕೂತಿದ್ದೇವೆ, ನೆಲೆತಪ್ಪಿದ ಅವು ನಮ್ಮ ಜಾಗಗಳಿಗೆ ಬಂದಿವೆಯಷ್ಟೆ' ಎನ್ನುತ್ತಾರೆ.

ಏರಿದ ವ್ಯವಸಾಯ ಚಟುವಟಿಕೆ, ನಗರೀಕರಣ, ಔದ್ಯೋಗೀಕರಣಗಳಿಂದಾಗಿ ಅವುಗಳ ಆವಾಸ ಬಹಳಷ್ಟು ಕಡಿಮೆಯಾಗಿದೆ. ಒಮ್ಮೆ ಕೋತಿಗಳು ಮನುಷ್ಯರಿಗೆ ಹತ್ತಿರವಾಗಿಬಿಟ್ಟರೆ ಅವು ತಮ್ಮ ಮೂಲ ವಾಸಸ್ಥಳಗಳಿಗೆ ಹಿಂತಿರುಗಿ ಹೋಗುವುದಿಲ್ಲ.

ರಾಷ್ಟ್ರೀಯ ಉದ್ಯಾನವನ ಮತ್ತು ರಸ್ತೆಯ ಬದಿ ಕೋತಿಗಳಿಗೆ ಜನರು ಆಹಾರ ನೀಡುವ ದೃಶ್ಯಗಳು ಸರ್ವೇ ಸಾಮಾನ್ಯ. ಮನುಷ್ಯರ ಒಡನಾಟ ಹೆಚ್ಚಾಗಿ ಮನುಷ್ಯರಷ್ಟೇ ಸಲೀಸಾಗಿ ಪ್ಯಾಕೆಟ್‌ಗಳನ್ನು ತೆರೆಯುವುದನ್ನು ಕಲಿತಿರುವ ಮಂಗಗಳು ಜನರ ಬ್ಯಾಗ್, ಕೈಗಳಿಂದ ಆಹಾರ ಕಸಿದು ತಿನ್ನುವಲ್ಲಿ ನಿಷ್ಣಾತವಾಗಿವೆ. ನಗರ ಪ್ರದೇಶಗಳಲ್ಲಿರುವ ಕೋತಿಗಳಿಗೆ ಅವುಗಳ ಸಹಜ ಆಹಾರ ದೊರಕದೆ ನಾವು ನೀಡುವ ಆಹಾರವನ್ನೇ ಅವಲಂಬಿಸಬೇಕಾಗಿದೆ. ಹಳ್ಳಿ ಹಾಗೂ ಸಣ್ಣ ಊರುಗಳ ಕೋತಿಗಳು ಜನ ಚೆಲ್ಲುವ ಕಸದಲ್ಲೂ ಆಹಾರ ಅರಸುತ್ತವೆ. ದೇವಸ್ಥಾನದ ಕೋತಿಗಳಿಗೆ ಸುಲಭವಾಗಿ ಅನ್ನ ಸಿಗುತ್ತದೆ. ಸ್ಥಳೀಯ ಆಡಳಿತ ಸಂಸ್ಥೆಗಳ ಕಣ್ಣು ತಪ್ಪಿಸಿ ಕಸ ಚೆಲ್ಲುವ ಪ್ರಕರಣಗಳಿಗೇನೂ ಕಡಿಮೆಯಿಲ್ಲ.

### ವಿವಿಧ ಕ್ರಮ - ಪರಿಣಾಮ

ಒಡಿಶಾ, ಕೇರಳ, ತೆಲಂಗಾಣ, ಕರ್ನಾಟಕ ರಾಜ್ಯಗಳು 'ಮಂಕೀ ಪಾರ್ಕ್' ಸ್ಥಾಪನೆಗೆ ಒತ್ತು ನೀಡಿವೆ. ಒಡಿಶಾದಲ್ಲಿ ಐದು ಕಿ.ಮೀ. ಉದ್ದದ ಜಾಗದಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಹಣ್ಣು ಬಿಡುವ ಮರಗಳನ್ನು ನೆಟ್ಟು ಮಂಗಗಳ ರಕ್ಷಣೆಗೆ ನಿಂತಿದೆ. ತೆಲಂಗಾಣದವರು ಹೆದ್ದಾರಿ ಬದಿಯ ಉದ್ದಕ್ಕೂ ಹಣ್ಣು ಬಿಡುವ ಮರ ನೆಟ್ಟಿದ್ದಾರೆ. ಕೇರಳದವರು ಮಂಗಗಳು ದಾಳಿ ಮಾಡದ ಶುಂಠಿ, ಅರಿಶಿಣ, ನಿಂಬೆ ಮತ್ತು ಮಾರಿಗೋಲ್ಡ್ ಹೂ ಬೆಳೆಯುವುದನ್ನು ಶುರುಮಾಡಿದ್ದಾರೆ. ಶಿವಮೊಗ್ಗದಲ್ಲಿ 'ಮಂಕಿ ಪಾರ್ಕ್' ಸ್ಥಾಪನೆಯಾಗುತ್ತಿದೆ. ಪಂಜಾಬಿನವರು ಮಂಗಗಳ ದನಿ ಅನುಕರಿಸಿ ಓಡಿಸುವ ಪ್ರಯತ್ನ ಮಾಡುತ್ತಿದ್ದಾರೆ. ಕರ್ನಾಟಕ ಮತ್ತು ಹರಿಯಾಣಗಳು ಮಂಗಗಳ ಹಾವಳಿ ತಡೆಯಲು ಹೆಲ್ಪ್‌ಲೈನ್ ವ್ಯವಸ್ಥೆ ಮಾಡಿವೆ.

ಗ್ರಾಮೀಣ ಭಾಗಗಳಲ್ಲಿ ಬೆಳೆ ನಾಶ, ನಗರಗಳಲ್ಲಿ ಜನರ ಮೇಲೆ ದಾಳಿ ಮಾಡಿ ಕಡಿಯುವುದು ಮತ್ತು ಪ್ರವಾಸಿತಾಣಗಳಲ್ಲಿ ಜನರಿಗೆ ತೊಂದರೆ ಕೊಡುವುದರಿಂದ ಕೋತಿಗಳು ಸದಾ ಸುದ್ದಿಯಲ್ಲಿರುತ್ತವೆ. ಎಲ್ಲಿಯವರೆಗೆ ಮನುಷ್ಯರು ಮಂಗಗಳ ಮೇಲೆ ಕರುಣೆ ತೋರಿಸಿ ಆಹಾರ ನೀಡುತ್ತಾರೆಯೋ ಅಲ್ಲಿಯವರೆಗೆ ಮಾನವ–ಮಂಗ ಸಂಘರ್ಷ ನಿಲ್ಲುವುದಿಲ್ಲ. ಅರಣ್ಯ ಇಲಾಖೆ, ನಗರ ಸಭೆ, ಶಿಕ್ಷಣ ಸಂಸ್ಥೆಗಳು ಜನ ಮಂಗಗಳಿಗೆ ಆಹಾರ ನೀಡುವುದನ್ನು ನಿಲ್ಲಿಸುವಂತೆ ಕ್ರಮವಹಿಸಬೇಕು.

ನೈಸರ್ಗಿಕ ಸಂಪನ್ಮೂಲಗಳ ಕೊರತೆಯಿಂದ ಮಾನವ–ಮಂಗನ ನಡುವೆ ಆಹಾರ ಮತ್ತು ವಾಸಸ್ಥಳಗಳಿಗಾಗಿ ಪೈಪೋಟಿ ಶುರುವಾಗಿದೆ. ಗಂಡು–ಹೆಣ್ಣಿನ ಸಂಖ್ಯೆಯಲ್ಲಿ ವ್ಯತ್ಯಾಸವಾದ್ದರಿಂದ ಅವುಗಳ ಸಂಖ್ಯೆ ತೀವ್ರ ಹೆಚ್ಚಾಗಿದೆ ಎಂದಿರುವ ತಜ್ಞರು, ಇರುವ ಹಸಿರು ಜಾಗಗಳನ್ನು ಮಂಗಗಳಿಗಾಗಿ ವಾಸ ಯೋಗ್ಯವನ್ನಾಗಿಸಬೇಕು ಎಂದು ಒತ್ತಾಯಿಸುತ್ತಿದ್ದಾರೆ. ಸಮರ್ಪಕ ಕಸ ವಿಲೇವಾರಿಯ ಕಡೆಯೂ ಹೆಚ್ಚಿನ ಗಮನ ಹರಿಸಬೇಕು ಎಂಬುದು ಅವರ ಅಭಿಮತ.

ಆಯಾ ಪ್ರದೇಶಗಳ ಅಗತ್ಯಕ್ಕನುಗುಣವಾಗಿ 'ವಾನರ ನೀತಿ'ಯನ್ನು ರೂಪಿಸಬೇಕು ಮತ್ತು ವಾನರ ವಿಷಯವು ರಾಜ್ಯ ಸರ್ಕಾರದ ಸುಪರ್ದಿಯಲ್ಲಿದ್ದು, ಅದನ್ನು ಕೇಂದ್ರಕ್ಕೆ ವರ್ಗಾಯಿಸಬೇಕೆನ್ನುವ ಅಭಿಪ್ರಾಯ ತೀವ್ರವಾಗಿದೆ. ಅನಿಯಂತ್ರಿತ ಸಂತಾನ ತಡೆಯಲು ಹೆಣ್ಣು ಕೋತಿಗಳ ಸಂತಾನಶಕ್ತಿ ಹರಣದ ಕಡೆ ಹೆಚ್ಚು ಮುತುವರ್ಜಿ ವಹಿಸಬೇಕು ಎಂಬುದು ಅವರ ಸಲಹೆ.

## ಅಧ್ಯಾಯ-3

### ರೋಗದೂತ? ಶಾಂತಿದೂತ?

'ಕಸ್ತೂರಿ ನಿವಾಸ' ಸಿನಿಮಾದಲ್ಲಿ ರಾಜಕುಮಾರ್ ಹೆಗಲ ಮೇಲೆ ಕುಳಿತ ಪಾರಿವಾಳವನ್ನು ಮರೆಯುವುದುಂಟೆ? ಒಡಿಶಾ ರಾಜ್ಯದಲ್ಲಿ ನೂರಾರು ಪಾರಿವಾಳಗಳು ಸುದ್ದಿವಾಹಕಗಳಾಗಿ ಪೊಲೀಸು ಇಲಾಖೆಗೆ ಇಂದಿಗೂ ಕೆಲಸ ಮಾಡುತ್ತಿವೆ.

'ಕಬೂತರ್ ಜಾ ಜಾ ಜಾ' ಎಂಬ ಪ್ರಖ್ಯಾತ ಹಿಂದಿ ಸಿನಿಮಾ ಗೀತೆ ಯಾರಿಗೆ ತಾನೆ ನೆನಪಿಲ್ಲ? ನಾಯಕಿ ತನ್ನ ಪ್ರೇಮ ನಿವೇದನೆ ಮಾಡಿಕೊಳ್ಳಲು ಪಾರಿವಾಳದ ಕಾಲಿಗೆ ಪ್ರೇಮಪತ್ರ ಸಿಕ್ಕಿಸಿ, ಇನಿಯನಿಗೆ ಕೊಟ್ಟುಬಾ ಎಂದು ಹೇಳಿಕಳಿಸುತ್ತಾಳೆ. ಶ್ವೇತ ವರ್ಣದ ಮುದ್ದಾದ ಪಾರಿವಾಳ ಆ ಕೆಲಸವನ್ನು ಚಾಚೂ ತಪ್ಪದೆ ಮಾಡಿ ಮುಗಿಸುತ್ತದೆ ಮತ್ತು ಜನರ ಚಪ್ಪಾಳೆ ಗಿಟ್ಟಿಸುತ್ತದೆ. ಅಲ್ಲಿಂದಿಲ್ಲಿಗೆ



ರೇಬಿಸ್ ಲಸಿಕೆ ಹಾಕಲು ಬೀದಿ ನಾಯಿಯನ್ನು ಹಿಡಿಯುತ್ತಿರುವ ಬಿಬಿಎಂಪಿ ಸಿಬ್ಬಂದಿ

ಮೂವತ್ತೆರಡು ವರ್ಷಗಳಾಗಿವೆ. ಈಗ ಪರಿಸ್ಥಿತಿ ಬದಲಾಗಿದ್ದು, ಜನ ಪಾರಿವಾಳಗಳನ್ನು ತಮ್ಮ ಜಾಗಗಳಿಂದ ಓಡಿಸಲು ಚಪ್ಪಾಳೆ ತಟ್ಟುತ್ತಿದ್ದಾರೆ. ನಮ್ಮಿಂದ ದೂರ ಹೋಗು ಎಂದು ಬಗೆಬಗೆಯ ಪ್ರಯತ್ನ ಮಾಡಿ ಓಡಿಸುತ್ತಿದ್ದಾರೆ.

ಮನುಷ್ಯವಾಸದ ಬಳಿ ಹೆಚ್ಚಾಗಿರುವ ಪಾರಿವಾಳಗಳು ಜನರ ಆರೋಗ್ಯವನ್ನು ದೊಡ್ಡ ಮಟ್ಟದಲ್ಲಿ ಕೆಡಿಸುತ್ತಿವೆ. ಪಾರಿವಾಳದ ಹಿಕ್ಕೆಯಿಂದ ಹೊಮ್ಮುವ ಅಲರ್ಜಿಯಿಂದ ಮಾನವನ ಶ್ವಾಸಕೋಶಕ್ಕೆ ಧಕ್ಕೆಯಾಗುತ್ತಿದೆ. ಹಿಕ್ಕೆಯಲ್ಲಿರುವ ಪ್ರತಿಕಾಯವನ್ನು ಉಸಿರಾಡುವುದರಿಂದ ಮನುಷ್ಯನ ಉಸಿರಾಟವೇ ಕಷ್ಟವಾಗುತ್ತಿದೆ. ಅನಾರೋಗ್ಯಕ್ಕೆ ತುತ್ತಾಗುವ ಜನ ಔಷಧಿಗಾಗಿ ಸಾವಿರಾರು ರೂಪಾಯಿ ವ್ಯಯಿಸಬೇಕಾಗಿದೆ ಎಂಬ ವರದಿಗಳಿವೆ. ಪಾರಿವಾಳಗಳ ಹಿಕ್ಕೆಯಿಂದ 60 ವಿವಿಧ ರೋಗಗಳು ಹಬ್ಬುತ್ತವೆ ಎಂಬುದು ಸಂಶೋಧಕರ ಮಾತು. ಹಿಕ್ಕೆಯಲ್ಲಿರುವ ರೋಗಕಾರಕ ಸೂಕ್ಷ್ಮಜೀವಿಗಳು ಮನುಷ್ಯನ ಗುಲ್ಮ ಮತ್ತು ಯಕೃತ್ತುಗಳನ್ನು ಹಾಳುಮಾಡುತ್ತವೆಯಲ್ಲದೆ ಕೇಂದ್ರ ನರಮಂಡಲ ವ್ಯವಸ್ಥೆಯನ್ನೂ ಕೆಡಿಸಬಲ್ಲವು ಎಂಬ ಮಾಹಿತಿಯಿದೆ.

ಪಾರಿವಾಳಗಳು ಹಾಕುವ ಹಿಕ್ಕೆಯ ಸಂಪರ್ಕಕ್ಕೆ ಬರುವ ಜನರಲ್ಲಿ ನ್ಯುಮೋನೈಟಿಸ್ ಹೆಚ್ಚಾಗಿ ಕಂಡುಬರುತ್ತಿದೆ ಎನ್ನುವ ವೈದ್ಯರು, ಕಳೆದ ಹತ್ತು–ಹದಿನೈದು ವರ್ಷಗಳಲ್ಲಿ ನಗರಗಳಲ್ಲಿ ಕಾಯಿಲೆ ಬೀಳುವವರ ಸಂಖ್ಯೆ ಐದಾರು ಪಟ್ಟು ಹೆಚ್ಚಿದೆ ಎಂದು ದಾಖಲೆ ನೀಡುತ್ತಾರೆ. ಪಾರಿವಾಳದ ಹಿಕ್ಕೆಯು ಶ್ವಾಸಕೋಶದಿಂದ ಮೆದುಳಿಗೆ ಹರಡುವ ಫಂಗಲ್ ಸೋಂಕನ್ನು ಹಬ್ಬಿಸುತ್ತದೆ.